4) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು:

ವಿಷಯ: (i) ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನ.

+ಶ್ರೀ ಜಗದೀಶ ಶೆಟ್ಟರ್(ಮಾನ್ಯ ವಿರೋಧಪಕ್ಷ ನಾಯಕರು): ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಇದ್ದಾರೆ. ನಾನು ಕಳೆದ ಮೂರು ದಿನಗಳ ಹಿಂದೆ ಒಂದು ವಿಷಯವನ್ನು ಪ್ರಸ್ತಾಪಿಸಿದ್ದೆ, ಗೋವಾ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಈಗಾಗಲೇ ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪವಾಗಿದೆ. ಕರ್ನಾಟಕದಿಂದ ಸಾವಿರಾರು ಜನರು ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ 24 ಜನರು ಮೃತಪಟ್ಟರು. ಹಾಗೆಯೇ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ಹೋರಾಟಗಾರರು ಅದರಲ್ಲಿ ಭಾಗವಹಿಸಿದ್ದರು. ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆ ಗೌರವಕೊಡುವ ದೃಷ್ಟಿಯಿಂದ ನಮ್ಮ ರಾಜ್ಯ ಸರ್ಕಾರವು 1991ನೇ ಇಸವಿಯಲ್ಲಿ ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದಂಥ ಹೋರಾಟಗಾರರಿಗೆ ಗೌರವಧನವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದರು. 1991ನೇ ಇಸವಿಯಿಂದ 1995ರವರೆಗೆ ಈ ಗೌರವಧನವನ್ನು ಕೊಡುತ್ತಾ ಬಂದು 1995ರಲ್ಲಿ ನಿಲ್ಲಿಸಿದರು. ಆಗ ಇದ್ದಂಥ ಸರಕಾರದವರು ಹಲವಾರು ಕಾರಣಗಳಿಗಾಗಿ ಇದನ್ನು ನಿಲ್ಲಿಸಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಪ್ರಮುಖಿತಃ ಆಗ ಶ್ರೀರಾಮರೆಡ್ಡಿ ಎಂಬಂಥ ಒಬ್ಬ ಗೋವಾ ಸ್ವಾತಂತ್ರ್ಯ ಹೋರಾಟಗಾರರನ್ನು ಅದಕ್ಕೆ ಲೀಡರ್ ಎಂದು ಮಾಡಿದ್ದರು ಅವರ ಮೂಲಕ ಹಲವಾರು ಹೆಸರುಗಳು ಶಿಫಾರಸ್ಸಿನೊಂದಿಗೆ ಬಂದಿದ್ದವು. ಅವುಗಳನ್ನು ಸರಕಾರದವರು ಕನ್ಸಿಡರ್ ಮಾಡಿದ್ದರು. ಈ ಹಂತದಲ್ಲಿ ಕೆಲವೊಂದು ಖೊಟ್ಟಿ ಸಹಿ ಮಾಡುವುದರ ಮೂಲಕ ಮತ್ತು ಖೊಟ್ಟಿ ಸ್ವಾತಂತ್ರ್ಯ ಹೋರಾಟಗಾರರೆಂದು ಹೇಳಿಕೊಳ್ಳುವುದರ ಮೂಲಕ ಗೌರವಧನವನ್ನು ಪಡೆಯುವಂಥದ್ದಾಗಿತ್ತು. ಇದನ್ನು ಗಮನಿಸಿದ ಸರಕಾರದವರು 1995ರಲ್ಲಿ ಗೌರವಧನವನ್ನು ಕೊಡುವುದನ್ನು ತೆಗೆದು ಹಾಕಿದರು. ಇದರಿಂದಾಗಿ ನಿಜವಾಗಿಯೂ ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಯಾರು ಭಾಗವಹಿಸಿದ್ದರೋ ಅವರುಗಳು ಕೂಡ ಗೌರವಧನ ಪಡೆಯುವ ವಿಚಾರದಲ್ಲಿ ವಂಚಿತರಾದರು. ಸರಕಾರದವರು ಖೊಟ್ಟಿ ಸ್ವಾತಂತ್ರ್ಯ ಹೋರಾಟಗಾರರು ಯಾರು ಎಂದು ಐಡೆಂಟಿಫೈ ಮಾಡಿ ಅಂಥವರ ಹೆಸರನ್ನು ತೆಗೆದು ಹಾಕಬಹುದಾಗಿತ್ತು. ಆ ಕೆಲಸವನ್ನು ಮಾಡದೇ ಇಡೀ ಲಿಸ್ಟ್‌ನ್ನು ರದ್ದು ಪಡಿಸಿರುವುದು ಸರಿಯಲ್ಲ ಎಂದು ಹೇಳಬಯಸುತ್ತೇನೆ. ಆದ್ದರಿಂದ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ 1991ರಿಂದ ಕೊಡುತ್ತಾ ಬಂದಿದ್ದ ಗೌರವಧನವನ್ನು ಪುನಃ ಮುಂದುವರಿಸಬೇಕು ಎಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಖೊಟ್ಟಿ ಸ್ವಾತಂತ್ರ್ಯ ಹೋರಟಗಾರರು ಇದ್ದಲ್ಲಿ ಅವರನ್ನು ಗುರುತಿಸಿ ಅವರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕುವ ವ್ಯವಸ್ಥೆಯನ್ನು

ಮಾಡಬೇಕು. ಯಾರು ನಿಜವಾದ ಹೋರಾಟಗಾರರಿದ್ದಾರೆ, ಅವರಿಗೆ ಗೌರವಧನವನ್ನು ಕೊಡುವ ವ್ಯವಸ್ಥೆಯಾಗಬೇಕು. ಇದೇ ರೀತಿಯಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ದೂರುಗಳು ಬಂದ ಕೂಡಲೇ ಕ್ರಮ ಜರುಗಿಸಿ ಕೆಲವೊಂದು ವರ್ಷಗಳ ಅವಧಿಗೆ ಗೌರವಧನ ಕೊಡುವುದನ್ನು ನಿಲ್ಲಿಸಿದ್ದರು. ನಿಜವಾದ ಹೋರಾಟಗಾರರನ್ನು ಗುರುತಿಸಿದ ನಂತರ ಪುನಃ ಗೌರವಧನ ಕೊಡುವುದನ್ನು ಪ್ರಾರಂಭಿಸಿದ್ದಾರೆ. ಆದ್ದರಿಂದ, ಸನ್ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರದಲ್ಲಿ ಆದ್ಯ ಗಮನವನ್ನು ಹರಿಸಿ ನಿಜವಾದ ಗೋವಾ ಸ್ವಾತಂತ್ರ್ಯ ಹೋರಾಟಗಾರರು ಯಾರಿದ್ದಾರೋ ಅವರನ್ನು ಗುರುತಿಸಿ ಗೌರವಧನವನ್ನು ಕೊಡುವ ಪದ್ಧತಿಯನ್ನು ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು): ಮಾನ್ಯ ಅಧ್ಯಕ್ಷರೇ, ಗೋವಾ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಅದರಲ್ಲಿ ಭಾಗವಹಿಸಿರತಕ್ಕ ಸತ್ಯಾಗ್ರಹಿಗಳಿಗೆ ರಾಷ್ಟ್ರದ ಗೌರವವನ್ನು ಸೂಚಿಸುವುದಕ್ಕೋಸ್ಕರವಾಗಿ ಗೌರವಧನವನ್ನು ಕೊಡಬೇಕೆಂದು ತೀರ್ಮಾನವಾಗಿತ್ತು. ಸುಮಾರು 500 ಜನ ಸತ್ಯಾಗ್ರಹಿಗಳು ಈ ಒಂದು ಚೌಕಟ್ಟಿನಲ್ಲಿ ಬರುತ್ತಾರೆ ಎಂದು ಒಂದು ಅಂದಾಜನ್ನು ಮಾಡಲಾಗಿತ್ತು. ಆದರೆ, ಅದು ಕ್ರಮೇಣ 4200 ನಂಬರ್‌ವರೆಗೆ ತಲುಪಿತ್ತು. ಆಗ ಶ್ರೀ ಜೆ.ಎಲ್.ರಾಮರೆಡ್ಡಿ ಎನ್ನುವವರಿಗೆ ಸತ್ಯಾಗ್ರಹಿಗಳನ್ನು ಸರ್ಟಿಫೈ ಮಾಡುವಂಥ ಒಂದು ಅಧಿಕಾರವನ್ನು ಕೊಡಲಾಗಿತ್ತು. ಅವರು 4200 ಜನರನ್ನು ಸರ್ಟಿಫೈ ಮಾಡಿದರು. ಅನಂತರ, ಸರಕಾರದ ಗಮನಕ್ಕೆ ಕಳವಳಕಾರಿಯಾದ ವಿಚಾರ ಬಂತು ತಮ್ಮ ಹೆಸರನ್ನು ಫೋರ್ಜರಿ ಮಾಡಿದ್ದಾರೆ ಎಂಬಿತ್ಯಾದಿ ದೂರುಗಳು ಬಂದುವು. ಅದೇ ರೀತಿಯಲ್ಲಿ ಪ್ರಮಾಣಪತ್ರಗಳು ಸಾಕಷ್ಟು ಸಂಖ್ಯೆಯಲ್ಲಿ ನಕಲಿಯಾಗಿವೆ ಎಂದು ದೂರುಗಳು ಬಂದುವು. ಇದು ನಡೆದುದು 1992 ಡಿಸೆಂಬರ್ ತಿಂಗಳಲ್ಲಿ. ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ರಾಜ್ಯ ಸರಕಾರದವರು ಉದ್ಯುಕ್ತರಾದಾಗ ಈ ಸಂಬಂಧವಾಗಿ ಕೆಲವರು ಹೈಕೋರ್ಟ್‌ಗೆ ಹೋದರು. ವಿಚಾರವು ಸಿಂಗಲ್ ಜಡ್ಜ್ ಮುಂದೆ ಹೋಯಿತು. ಅನಂತರ, ಡಿವಿಜನಲ್ ಬೆಂಚ್‌ಗೆ ಅಪೀಲ್ ಹಾಕಿದರು. ಅಷ್ಟಕ್ಕೆ ನಿಲ್ಲದ ಸತ್ಯಾಗ್ರಹಿಗಳು ಸುಪ್ರೀಂ ಕೋರ್ಟಿಗೂ ಹೋದರು. ಸುಪ್ರೀಂ ಕೋರ್ಟ್‌ನಲ್ಲಿಯೂ ಕೂಡ ಅವರು ಅಹವಾಲಿಗೆ ಸಕಾರಾತ್ಮಕವಾದಂಥ ಮನ್ನಣೆಯು ಸಿಗಲಿಲ್ಲ. ಆದ್ದರಿಂದ, ಈ ಪಿಂಚಣಿ ಹಣವನ್ನು ಕೊಡತಕ್ಕಂಥ ವಿಚಾರದಲ್ಲಿ ಸರಕಾರದವರು ಪುನರ್‌ವಿಮರ್ಶೆ ಮಾಡಬೇಕೆನ್ನುವ ದೃಷ್ಟಿಯಿಂದ ಸುಮಾರು 2950 ಜನರನ್ನು ಪಟ್ಟಿಯಿಂದ ತೆಗೆದು ಹಾಕಿದ್ದರು. ಇನ್ನುಳಿದವರ ಹೆಸರುಗಳನ್ನು ನಾವು ಪರಿಶೀಲನೆ ಮಾಡುತ್ತಾ ಇದ್ದೇವೆ. ಆದರೂ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರತಕ್ಕಂಥಾದ್ದನ್ನು ಗಮನದಲ್ಲಿಟ್ಟುಕೊಂಡು ಎಲ್ಲಿ ಜೆನ್ಯೂನ್ ಕೇಸಸ್ ಇವೆ, ಅವನ್ನು ನಾವು ಯೋಚನೆ ಮಾಡುತ್ತೇವೆ.